# ಕಿರುತೆರೆ ಮನೆ ಬಾಗಿಲು ತೆರೆಯುತ್ತೆ

**ನಿಖಿಲ್ ಮಾಳಿಯಕ್ಕಲ್**
ಕಲರ್ಸ್ ಸೂಪರ್‌ನ
'ಮನೆಯೇ ಮಂತ್ರಾಲಯ'ದ ಜೀವನ್

◆ **ಅರ್ಧಕ್ಕೆ ನಿಂತ ಪಾತ್ರವನ್ನು ನಿರ್ವಹಿಸುವ ಕಲಾವಿದನ ಸವಾಲುಗಳು ಹೇಗಿರುತ್ತವೆ?**

ತಾಂತ್ರಿಕ ಕಾರಣಗಳಿಗೆ ಹೀಗೆ ಆಗುತ್ತದೆ. ನಟನೊಬ್ಬ ಕಥೆಯ ಅರ್ಧದಲ್ಲಿ ಪ್ರವೇಶ ಪಡೆದಾಗ ವೀಕ್ಷಕರಿಗೆ ಹಳೆಯ ನಟನ ರೂಪವನ್ನು ಮೀರಿ ನಮ್ಮ ರೂಪವನ್ನು ಕಟ್ಟಿಕೊಡಬೇಕಾಗುತ್ತದೆ. ಇಲ್ಲಿ ಜೀವನ್ ಪಾತ್ರ ಒಂದೇ ಆದರೆ ನಟರು ಇಬ್ಬರಾಗಿದ್ದೇವೆ. ನಟರು ಯಾರೇ ಆದರೂ ಜೀವನ್ ಆಗಿಯೇ ಕಾಣಿಸಿಕೊಳ್ಳಬೇಕು. ಹೊಸ ನಟ ಹಿಂದಿನ ಹಲವಾರು ಕಂತುಗಳನ್ನು ನೋಡಬೇಕು. ಆಗ ಕಥೆ ತಿಳಿಯುವ ಜೊತೆಗೆ ಪಾತ್ರದ ಬಗ್ಗೆ ಒಂದು ಕಲ್ಪನೆ ಬರುತ್ತದೆ. ಅದರ ಸ್ಟೈಲ್ ಜೊತೆ ನಮ್ಮದೇ ಆದ ಅನನ್ಯತೆಯನ್ನು ಪಾತ್ರಕ್ಕೆ ಹೇಗೆ ಕೊಡುತ್ತೇವೆ ಎನ್ನುವುದು ನಿಜವಾದ ಸವಾಲು.

ಕಿರುಮಣಿ ಕುಟುಂಬದ ಅತ್ಯಂತ ಮುದ್ದು ಮೊಮ್ಮಗ ಜೀವನ್. ಅವನು ತನಗೆ ಎಷ್ಟೇ ನೋವುಗಳಿದ್ದರೂ ಕುಟುಂಬದವರು ಚೆನ್ನಾಗಿರಬೇಕು ಎನ್ನುವ ಭಾವನೆ ಇರುವ ಸದ್ಗುಣಗಳ ಯುವಕ. ತೊಂದರೆಯಲ್ಲಿ ಇರುವವರಿಗೆ ಸದಾ ನೆರವು ನೀಡಲು ಮುಂದಿರುತ್ತಾನೆ. ವೈಯಕ್ತಿಕವಾಗಿ ತುಂಬಾ ಶಿಸ್ತಿನ ಗುಣವನ್ನು ಹೊಂದಿರುವ ಆ ಪಾತ್ರ ನನಗೆ ತುಂಬಾ ಇಷ್ಟ.

◆ **ಪಾತ್ರಕ್ಕೆ ಜೀವ ತುಂಬ ಬೇಕು ಅಂದರೆ ನಿಮ್ಮ ಹೋಂ ವರ್ಕ್ ಹೇಗಿರುತ್ತದೆ?**

ನಾವು ಬದುಕಿದ್ದೇವೆ ಎಂದರೆ ನಮಗೂ ಅನುಭವಗಳು ಆಗಿರುತ್ತವೆ. ಅವು ಅಪಾರ ಅನುಭವಗಳ ಗಣಿ ಅಲ್ಲದಿದ್ದರೂ ದುಃಖ, ಸಂತೋಷ, ಸಿಟ್ಟು ಸೇರಿದಂತೆ ನವ ರಸಗಳ ನವ ಭಾವಗಳನ್ನೂ ಅನುಭವಿಸಿರುತ್ತೇವೆ. ಅವು ನಮ್ಮ ಮನೋಪಟಲದಲ್ಲಿ ಅಚ್ಚಳಿಯದೇ ಉಳಿದಿರುತ್ತವೆ. ಅವು ನಮ್ಮ ನೆರವಿಗೆ ಬರುತ್ತವೆ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ವೈಯಕ್ತಿಕವಾಗಿ ನಾನು ಅದನ್ನು ಅಳವಡಿಸಿಕೊಂಡಿದ್ದೇನೆ. ನನಗೆ ಕನ್ನಡಿ ಅತ್ಯಂತ ಪರಮ ಗುರು ಮತ್ತು ಗೆಳೆಯ ಕೂಡ ಹೌದು. ನಾನು ಪಾತ್ರವನ್ನು ಹೇಗೆ ನಿಭಾಯಿಸಬೇಕು ಎನ್ನುವ ತಾಲೀಮು ಕನ್ನಡಿ ಮುಂದೆ ಮಾಡುತ್ತೇನೆ. ಅಲ್ಲಿ ನನ್ನ ಭಾವಾಭಿವ್ಯಕ್ತಿಯ ಬಿಂಬ ಕಾಣುತ್ತೇನೆ. ಆ ಕ್ಷಣದಲ್ಲೇ ಲೋಪ ದೋಷಗಳನ್ನೂ ಕಾಣಬಹುದು. ನನ್ನ ಅಭಿನಯ ನನಗೆ ಇಷ್ಟ ಆಗುವಂತೆ ಆಗಬೇಕು.



◆ **ಕಲಾವಿದ ಆಗಿದ್ದು ಹೇಗೆ, ಏಕೆ?**

ನಾನು ನಟ ಆಗಲೇ ಬೇಕು ಎಂದು ಈ ಕ್ಷೇತ್ರಕ್ಕೆ ಬಂದಿದ್ದೇನೆ. ಆದರೆ ಇದರಲ್ಲಿ ಸಾಕಷ್ಟು ಕಷ್ಟಗಳನ್ನೂ ಅನುಭವಿಸಿದ್ದೇನೆ. ನಾನು ಪಿಯುಸಿ ಓದುವಾಗಲೇ 'ಊಟ' ಎನ್ನುವ ಸಿನಿಮಾದಲ್ಲಿ ನಾಯಕ ನಟನಾಗಿ ಅಭಿನಯಿಸಿದ್ದೆ. ಅಷ್ಟರಲ್ಲಿ ಡಿಪ್ಲೊಮಾ ಆರ್ಕಿಟೆಕ್ಟ್ ಸೇರಿದೆ. ಅದನ್ನೂ ಬಿಟ್ಟು ಮೂರು ವರ್ಷ ಮನೆಯಲ್ಲೇ ಉಳಿದೆ. ನಮ್ಮ ಊರು ಮೈಸೂರು, ಅಲ್ಲೇ ರಂಗಭೂಮಿಗೆ ಪ್ರವೇಶ ಮಾಡಿದೆ. ಹಲವಾರು ನಾಟಕಗಳಲ್ಲೂ ನಟಿಸಿದೆ. ಅಷ್ಟರಲ್ಲಿ 'ಏಳು ಹಗಲುಗಳು ಆರು ರಾತ್ರಿಗಳು' ಎಂಬ ಸಿನಿಮಾ ಮಾಡಿದೆ. ಅದಾದ ಮೇಲೆ ಒಂದೊಂದೇ ಆಡಿಷನ್‌ಗಳನ್ನು ಕೊಡ್ತಾ ಇದ್ದೆ. ಅಂದಾಜು ಒಂದು ನೂರು ಆಡಿಷನ್ ನೀಡಿರಬಹುದು. ರಾಮ್‌ಜೀ ಈ ಪಾತ್ರಕ್ಕೆ ಅವಕಾಶ ಮಾಡಿಕೊಟ್ಟರು. ಕಿರುತೆರೆಯಲ್ಲಿ ಇದು ನನ್ನ ಮೊದಲ ಪ್ರಯತ್ನ. ಇಲ್ಲಿ ಅವಕಾಶ ಸಿಕ್ಕಿರುವುದು ನನ್ನ ಪಾಲಿಗೆ ಸಿಕ್ಕ ಕಾಣಿಕೆ ಎಂದೇ ನಾನು ಭಾವಿಸಿದ್ದೇನೆ.

◆ **ಮುಂದಿನ ಹೆಜ್ಜೆಗಳು ಹೇಗಿರಬಹುದು ಎಂದು ನಿರೀಕ್ಷೆ ಮಾಡಿದ್ದೀರಿ?**

ನಟನಾಗಿಯೇ ಉಳಿಯುತ್ತೇನೆ ಎನ್ನುವ ನಂಬಿಕೆ ಇದೆ. ಆ ಬಗ್ಗೆ ಭ್ರಮೆಗಳಿಲ್ಲ. ಈಗ ಮೂರ್ನಾಲ್ಕು ಸಿನಿಮಾಗಳು ನನ್ನ ಮುಂದಿವೆ. ಕಿರುತೆರೆಯನ್ನು ಬಿಡುವುದಿಲ್ಲ. ಅದರಲ್ಲೂ ಈ ಪಾತ್ರವನ್ನು ನಾನೇ ಮಾಡಬೇಕು. ಇಲ್ಲಿ ನನಗೊಂದು ಐಡೆಂಟಿಟಿ ಸಿಕ್ಕಿದೆ. ಜನ ಸಿನಿಮಾದಲ್ಲಿ ಗುರುತಿಸದಿದ್ದರೂ ಸೀರಿಯಲ್ ಮೂಲಕ ನನ್ನನ್ನು ಗುರುತಿಸಿದ್ದಾರೆ. ಅಂತಹ ಅನೇಕ ಅನುಭವಗಳು ನನಗೆ ಆಗಿವೆ. ನನಗೊಂದು ಸಾಮಾಜಿಕ ಮನ್ನಣೆ ಸಿಗುತ್ತಿದೆ ಎನ್ನುವುದು ಗೋಚರಿಸಿದೆ. ಸಿನಿಮಾ ಮತ್ತು ಕಿರುತೆರೆಗಳನ್ನು ನೋಡಿದಾಗ ಸಿನಿಮಾದಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳಲು ಹೋರಾಡಬೇಕಾಗುತ್ತದೆ. ಅದು ತುಂಬಾ ಸವಾಲಿರುವ ಕ್ಷೇತ್ರ. ಟೀವಿಯಲ್ಲಿಯೂ ಸವಾಲುಗಳಿವೆ. ಆದರೆ ಟೀವಿ ಸುಲಭವಾಗಿ ವೀಕ್ಷಕರ ಮನೆಯ ಬಾಗಿಲನ್ನು ನಮಗಾಗಿ ತೆರೆಯುತ್ತದೆ. ಅವರ ಮನಸ್ಸನ್ನೂ ಸುಲಭವಾಗಿ ತಲುವ ವೇದಿಕೆಯಾಗಿದೆ.

◆ **ಫಿಟ್‌ನೆಸ್ ಹೆಲ್ತ್ ಹೇಗೆ ಕಾಪಾಡುತ್ತೀರಿ?**

ಜಿಮ್‌ಗೆ ಹೋಗುತ್ತೇನೆ. ಹೊರಗಡೆ ಬಜೆಟ್‌ಗೆ ತಕ್ಕಂತೆ ತಿನ್ನುತ್ತೇನೆ. ಅನ್ನವನ್ನು ತಿನ್ನುವುದನ್ನು ತೀರಾ ಕಡಿಮೆ ಮಾಡಿದ್ದೇನೆ. ಹೊರಗಡೆ ಇಡ್ಲಿ ತಿನ್ನುವುದು ರೂಢಿ. ಆಹಾರದ ನಿರ್ವಹಣೆಯಲ್ಲಿ ತುಂಬಾ ನಿಗಾ ತೆಗೆದುಕೊಳ್ಳುತ್ತೇನೆ. ಆರೋಗ್ಯ ಮತ್ತು ಫಿಟ್ನೆಸ್ ಕಾಪಾಡದಿದ್ದರೆ ಕಷ್ಟ ಆಗುತ್ತದೆ.

■ **ರಾಘವೇಂದ್ರ ಕೆ**